**<u>ದಿನಾಂಕಃ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ. ಎಸ್ ಬಿ ಡಿ ವಕೀಲರಿಂದಃ-</u>**

1. ತಾವು ಚನ್ನಪಟ್ಟಣ ಟೌನ್ ನಲ್ಲಿ ಮಲ್ಟಿ ಸ್ಟಾರ್ ಜಿಮ್ ನಡೆಸುತಿತದ್ದೇನೆ ಎಂದು ಹೇಳಿದ್ದು ಎಷ್ಟನೆ ಇಸವಿ ಎಂದರೆ ಸಾಕ್ಷಿ 2008 ರಿಂದ ನವೆಂಬರ್-2021 ಎನ್ನುತ್ತಾರೆ. ತಾವು ಜಿಮ್ ತೆರೆಯಬೇಕಾದರೆ ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆಯಬೇಕು ಎಂದರೆ ಸಾಕ್ಷಿ ಹೌದು ಎಂದು ನುಡಿದು ಸಂಬಂಧಪಟ್ಟ ಇಲಾಖೆಯಿಂದ ಪರವಾನಿಗೆ ಪಡೆದೆ ತೆರೆದಿದ್ದೇನೆ ದಾಖಲೆ ಹಾಜರುಪಡಿಸಿದ್ದ್ಮೇನೆ ಎನ್ನುತಾರೆ. ಜೀಮ್ ನಲ್ಲಿ ಬರುವ ಅದಾಯವನ್ನು ಬ್ಯಾಂಕ್ ಮೂಲಕ ವ್ಯವಹರಿಸುತ್ತಿದ್ದೆ ಎಂದರೆ ಸಾಕ್ಷಿ ಬ್ಯಾಂಕ್ ಮೂಲಕ ಸ್ವಲ್ಪ ವ್ಯವಹಾರ ಆಗುತ್ತಿತ್ತು ಮತ್ತು ನಗದು ರೂಪದಲ್ಲಿ ಸ್ವಲ್ಪ ವ್ಯವಹಾರ ಆಗುತ್ತಿತ್ತು ಎನ್ನುತ್ತಾರೆ. 4 ಲಕ್ಷದ ಹಣದ ಪೈಕಿ 3 ಲಕ್ಷ ಹಣವನ್ನು ಬ್ಯಾಂಕ್ ಖಾತೆ ಮೂಲಕ ಪಡೆದಿರುತ್ತೇನೆ ಎಂದು ಹೇಳಿದ್ದು ಸದರಿ 3 ಲಕ್ಷ ಹಣ ನನ್ನ ವ್ಯವಹಾರದ ಮೂಲಕ ಬಂದ ಹಣ ಎನ್ನುತ್ತಾರೆ. ದಿ 17.02.2021ರಂದು ತಮ್ಮ ಬ್ಯಾಂಕ್ ಖಾತೆಯಿಂದ 3 ಲಕ್ಷ ಹಣ ಡ್ರಾ ಮಾಡಿರುವ ಬಗ್ಗೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಮಾಡಿದ್ದೇನೆ ಎನ್ನುತ್ತಾರೆ.

2. 3 ಲಕ್ಷ ಹಣವನ್ನು ನಾನು ಬ್ಯಾಂಕ್ ಖಾತೆಯಿಂದ ಡ್ರಾ ಮಾಡಿಲ್ಲ ಮತ್ತು 1 ಲಕ್ಷ ಹಣವನ್ನು ಮನೆಯಲ್ಲಿ ನಗದು ಇಟ್ಟು ಕೊಂಡಿರಲಿಲ್ಲ ಎಂದರೆ ಸರಿಯಲ್ಲ. ತಾವು ವ್ಯವಸಾಯದ ಜಮೀನು ಹೊಂದಿರುತ್ತೇನೆ ಎಂದು ಹೇಳಿದ್ದು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. 2021ರಲ್ಲಿ ತಮ್ಮ ಮಾಸಿಕ ಆದಾಯ ಎಷ್ಟು ಇತ್ತು ಎಂದರೆ ಸಾಕ್ಷಿ 50 ರಿಂದ 60 ಸಾವಿರ ಎನ್ನುತ್ತಾರೆ. ತಾವು ಆದಾಯ ತೆರಿಗೆ ಪಾವತಿದಾರರೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆಗಾದರೆ 2021ನೇ ಸಾಲಿನ ಅದಾಯ ತೆರಿಗೆಯಲ್ಲಿ ಸದರಿ ಚೆಕ್ಕಿನ ಹಣವನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿ ತೋರಿಸಿಲ್ಲ

ಎನ್ನುತ್ತಾರೆ. ಅರೋಪಿಯ ಗಂಡ ರಾಮು ನನ್ನ ಸ್ನೇಹಿತ ಎಂದರೆ ಸರಿ. ಅರೋಪಿಯ ಗಂಡ ರಾಮು ನಾನು ನಡೆಸುತಿತದ್ದ ಜಿಮ್ ಗೆ ಬರುತ್ತಿದ್ದ ಎಂದರೆ ಸರಿ. ನಾನು ಮತ್ತು ಆರೋಪಿಯ ಗಂಡ ಸೇರಿ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇವು ಎಂದರೆ ಸರಿ. ಆರೋಪಿಯ ಗಂಡ ಮನೆ ಕಟ್ಟುತ್ತಿದ್ದ ಸಂದರ್ಭದಲ್ಲಿ ಆರೋಪಿಗೆ ಸೇರಿದ ಚೆಕ್ಕುಗಳು ಮತ್ತು ಬ್ಯಾಂಕ್ ಪಾಸ್ ಪುಸ್ತಕವನ್ನು ತನ್ನ ಬಳಿ ಇಟ್ಟುಕೊಂಡಿದ್ದ ಎಂದರೆ ಸರಿಯಲ್ಲ.

3. ನನ್ನ ಮತ್ತು ಆರೋಪಿಯ ಗಂಡನ ನಡುವೆ ರಿಯಲ್ ಎಸ್ಟೇಟ್ ವ್ಯವಹಾರದ ಸಂಬಂಧ ವೈಮನಸ್ಸು ಆಗಿತ್ತು ಎಂದರೆ ಸರಿಯಲ್ಲ. ಆರೋಪಿಗೆ ಸೇರಿದ ಚೆಕ್ಕನ್ನು ಆರೋಪಿಯ ಗಂಡನ ಗಮನಕ್ಕೆ ಬಾರದಂತೆ ಈ ಕೇಸಿನಲ್ಲಿ ಹಾಜರುಪಡಿಸಿರುವ ಚೆಕ್ಕನ್ನು ತೆಗೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕಿನಲ್ಲಿರುವ ಸಹಿ ಮತ್ತು ಬರವಣಿಗೆ ಆರೋಪಿಯದ್ದು ಅಲ್ಲ ಎಂದರೆ ಸಾಕ್ಷಿ ಆರೋಪಿಯೇ ತಯಾರು ಮಾಡಿ ನನಗೆ ತಂದು ಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ಚೆಕ್ಕಿನಲ್ಲಿರುವ ಸಹಿ ಮತ್ತು ಹಸ್ತಾಕ್ಷರ ಆರೋಪಿದು ಅಲ್ಲ ಮತ್ತು ಆರೋಪಿ ನೀಡಿಲ್ಲ ಎಂದರೆ ಸರಿಯಲ್ಲ. ತಾವು ಆರೋಪಿಗೆ 4 ಲಕ್ಷ ಹಣವನ್ನು ಸಾಲವಾಗಿ ಕೊಟ್ಟಿದ್ದೇನೆ ಎಂದು ಹೇಳಿದ್ದು ಸದರಿ ಮರುಪಾವತಿಗೆ ಆರೋಪಿಯಿಂದ ಯಾವ ಆದಾಯದ ಮೂಲ ಇತ್ತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಆರೋಪಿ ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಮತ್ತು ಆರೋಪಿಯ ಗಂಡ ಕೋಳಿ ಫಾರಂ ಇಟ್ಟು ಕೊಂಡಿದ್ದರು ಎಂದು ನುಡಿಯುತ್ತಾರೆ. ಆರೋಪಿತರಿಗೆ 4 ಲಕ್ಷ ಹಣವನ್ನು ತಾವು ಕೊಟ್ಟಿದ್ದೇನೆ ಎಂದು ಹೇಳಿದ್ದು ಸದರಿ ಹಣವನ್ನು ಒಂದು ವರ್ಷದಲ್ಲಿ ಮರುಪಾವತಿ ಮಾಡುವುದಾಗಿ ಅರೋಪಿ ಹೇಳಿದ್ದರು ಎಂದು ತಾವು ಹೇಳಿದ್ದು ಸದರಿ ಹಣದ ಭದ್ರತೆಗೆ ತಾವೇನಾದರೂ ದಾಖಲೆ ಮಾಡಿಸಿಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಪಿ-1 ಚೆಕ್ಕಿಗೆ ಸಂಬಂಧಿಸಿದಂತೆ ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ಅರೋಪಿಯಿಂದ ಅನಾಗತ್ಯ ಹಣವನ್ನು ವಸೂಲಿ ಮಾಡಬೇಕು ಎಂಬ

ಉದ್ದೇಶದಿಂದ ನಾನು ಸುಳ್ಳು ಪ್ರಕರಣ ದಾಖಲು ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ